ಕ್ಷೇತ್ರವನ್ನು ಸಹ "ಸಿ" ಗುಂಪಿನಲ್ಲಿ ಸೇರಿಸಲಾಗಿದೆ. ಸರ್ಕಾರವು ಪ್ರವಾಸೀ ಕೇಂದ್ರಗಳನ್ನು ಅಭಿವೃದ್ಧಿಪಡಿಸಲು ಪ್ರಯತ್ನಗಳನ್ನು ಮುಂದುವರಿಸುತ್ತಿದೆ.

ಇ) ಕರ್ನಾಟಕ ಪ್ರವಾಸೋದ್ಯಮ ನೀತಿಯಲ್ಲಿ ಘೋಷಿಸಿರುವಂತೆ ಪ್ರವಾಸೋದ್ಯಮ ಅಭಿವೃದ್ಧಿ ಯೋಜನೆಗಳನ್ನು ಕೈಗೊಳ್ಳಲು ಮುಂದೆ ಬರುವ ಖಾಸಗಿ ಉದ್ಯಮಿಗಳಿಗೆ ಬಂಡವಾಳ ಹೂಡಿಕೆ ಮೇಲೆ ಗರಿಷ್ಠ ಸಬ್ಸಿಡಿ, ಉತ್ತೇಜನ ಮತ್ತು ರಿಯಾಯಿತಿಗಳನ್ನು ಸರ್ಕಾರ ನೀಡುವುದು.

ಮೂಡಬಿದರೆ ಪೋಲೀಸ್ ಸ್ಟೇಷನ್‌ಗೆ ಜೀಪು ಮತ್ತು ಸಿಬ್ಬಂದಿ ಹೆಚ್ಚಳ

258 (310) ಶ್ರೀ ಕೆ. ಸೋಮಪ್ಪ ಸುವರ್ಣ (ಮೂಡಬಿದರೆ):-

ರಾಜ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮೂಡಬಿದಿರೆ ಸ್ಟೇಷನ್ ವ್ಯಾಪ್ತಿಗೆ ಎಷ್ಟು ಗ್ರಾಮಗಳು ಸೇರಿಕೊಂಡಿವೆ;

ಆ) ಇಲ್ಲಿರುವ ಪೊಲೀಸ್ ಸಿಬ್ಬಂದಿಗಳ ಸಂಖ್ಯೆ ಎಷ್ಟು;

ಇ) ವಿಸ್ತಾರವಾದ ಈ ಪ್ರದೇಶದ ವ್ಯಾಪ್ತಿಯಲ್ಲಿ ಪೊಲೀಸರ ಕೆಲಸ ಸುಗಮಗೊಳಿಸುವಂತೆ ಇಲ್ಲಿಗೆ ಜೀಪನ್ನು ಒದಗಿಸಲಾಗುವುದೇ;

ಈ) ಈ ಸ್ಟೇಷನ್‌ಗೆ ಹೆಚ್ಚಿನ ಪೊಲೀಸ್ ಸಿಬ್ಬಂದಿಗಳ ನೇಮಕ ಮಾಡಲಾಗುವುದೇ ?

ಶ್ರೀ ರಮನಾಥ ರೈ (ರಾಜ್ಯ ಗೃಹ ಸಚಿವರು):–

ಅ) ಮೂಡಬಿದಿರೆ ಠಾಣೆಯ ವ್ಯಾಪ್ತಿಯಲ್ಲಿ 33 ಹಳ್ಳಿಗಳಿವೆ.

ಆ) ಮೂಡಿಬಿದರೆ ಠಾಣೆಯ ಸಿಬ್ಬಂದಿ ಬಲ 13.

ಇ) ಪರಿಶೀಲಿಸಲಾಗುತ್ತಿದೆ.

ಈ) ದಿನಾಂಕ: 1–4–93ರಿಂದ ಜಾರಿಗೆ ಬರುವಂತೆ ಹೆಚ್ಚಿನ ಸಿಬ್ಬಂದಿ ನೇಮಕ ಮಾಡಲಾಗಿದೆ.

ಹುಬ್ಬಳ್ಳಿ ತಾಲ್ಲೂಕು ಸೂಲ್ವಿ ಗ್ರಾಮಕ್ಕೆ ಹೊಸ ಪೋಲೀಸ್ ಠಾಣೆ

237 (486) ಶ್ರೀ ಪಿ.ಸಿ. ಸಿದ್ದನಗೌಡರ (ಕಲಘಟಗಿ):-

ರಾಜ್ಯ ಗೃಹಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹುಬ್ಬಳ್ಳಿ ತಾಲ್ಲೂಕು, ಸೂಲ್ವಿ ಗ್ರಾಮವು ನ್ಯಾಷನಲ್ ಹೈವೆ 4ರ ಪಕ್ಕದಲ್ಲಿದ್ದು, ಇದರ ಸುತ್ತಮುತ್ತ 20 ಹಳ್ಳಿಗಳು ಬರುತ್ತಿದ್ದು, ಇವರೆಲ್ಲರೂ ಹುಬ್ಬಳ್ಳಿ ಪೊಲೀಸ್ ಠಾಣೆಗೆ ಹೋಗಬೇಕಾಗುವುದರಿಂದ, ಸಾರ್ವಜನಿಕರಿಗೆ ತೊಂದರೆ ಆಗುತ್ತಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಇಲ್ಲಿ ಹೊಸದಾಗಿ ಪೊಲೀಸ್ ಠಾಣೆ ಆರಂಭಿಸಿ ಪಿಎಸ್‌ಐ ಪೋಸ್ಟ್ ಮಾಡಿ ಹೊಸದಾಗಿ ಠಾಣೆಯನ್ನು ಮಂಜೂರು ಮಾಡುವಿರಾ;

ಇ) ಮಾಡದಿದ್ದಲ್ಲಿ, ಅದಕ್ಕೆ ಕಾರಣವೇನು;